S. C. No.10/2019
PW.05

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 20 ಫ್ರಾ.ಸಾ. : 05**

ಸಾಕ್ಷಿಯ ಹೆಸರು : ರಾಹುಲ್ ದಯಾನಂದ ಬೊಗಲೆ

**ದಿನಾಂಕಃ 12-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

13. ಶವದ ಪಕ್ಕದಲ್ಲಿ ಒಂದು ಬನಿಯನ್ ಬಟ್ಟೆ ಸಹ ಬಿದ್ದಿತ್ತು ಹಾಗೂ ಅದಕ್ಕೆ ರಕ್ತ ತಾಗಿ ಕೆಸರಾಗಿತ್ತು. ಅಲ್ಲಿ ಪೊಲೀಸರು ಪಂಚನಾಮೆ ಮಾಡಿದ್ದು, ಪಂಚನಾಮೆ ಮಾಡುವ ಸಮಯದಲ್ಲಿ ಪೊಲೀಸರು 2 ಮತ್ತು 3 ನೇ ಆರೋಪಿ ಬಳಿ ಘಟನೆಯ ಬಗ್ಗೆ ಕೇಳಿದಾಗ, ಅವರು "ನಾವು ಹಾಗೂ 1 ನೇ ಆರೋಪಿ ಸೇರಿ, ಪ್ರೇಮಕುಮಾರನನ್ನು ಕೊಲೆ ಮಾಡಲು ಸಂಚು ರೂಪಿಸಿ, ದಿಃ 16-10-2018 ರಂದು ಮದ್ಯಾಹ್ನ 2 ನೇ ಆರೋಪಿ ಪ್ರೇಮಕುಮಾರಿನಿಗೆ ಕರೆ ಮಾಡಿ, ಒಂದು ಕಟ್ಟಿಗೆಯ ವ್ಯವಹಾರ ಇದೆ, ಸ್ವಲ್ಪ ಕದ್ರಾಗೆ ಹೋಗಿ ಬರೋಣ, ಬಾ ಎಂದು ಕರೆದಿದ್ದು, ಆಗ ಪ್ರೇಮಕುಮಾರ ತಾನು ಊಟ ಮಾಡಿ, ಬರುವುದಾಗಿ ಹೇಳಿರುತ್ತಾನೆ, ಆ ನಂತರ 2 ನೇ ಆರೋಪಿ ಕಾರವಾರ ಮಾರ್ಕೆಟ್ ನಲ್ಲಿ ಒಂದು ಕತ್ತಿಯನ್ನು ಖರೀದಿಸಿ ಹಾಗೂ ಈ ಮೊದಲೇ ಕುಂಬಾರವಾಡದಲ್ಲಿ 2 ಕತ್ತಿಗಳನ್ನು ತಯಾರಿಸಲು ಒಂದು ಕಬ್ಬಿಣವನ್ನು ಕೊಟ್ಟಿದ್ದು, ಸದರಿಯವರು ಕತ್ತಿ ತಯಾರು ಮಾಡಿ, ನೀಡಿಲ್ಲದ ಕಾರಣ, ಅವರ ಬಳಿಯೇ ಒಂದು ಕತ್ತಿಯನ್ನು ಖರೀದಿಸಿಕೊಂಡಿದ್ದು, ಆ ನಂತರ 2 ನೇ ಆರೋಪಿ ಪ್ರೇಮಕುಮಾರನಿಗೆ ಮತ್ತೊಮ್ಮೆ ಕರೆ ಮಾಡಿ, ಸಿವಿಲ್ ಆಸ್ಪತ್ರೆಯ ಬಳಿ ಬರುವಂತೆ ಹೇಳಿ, ತಾನು ಸಿವಿಲ್ ಆಸ್ಪತ್ರೆಯ ಬಳಿ ಕಾಯುತ್ತಿದ್ದು, ಅದರಂತೆ ಪ್ರೇಮಕುಮಾರ ಊಟ ಮುಗಿಸಿ, ತನ್ನ ಸ್ಕೂಟರ್ ಮೇಲೆ ಸಿವಿಲ್ ಆಸ್ಪತ್ರೆಯ ಬಳಿ ಬಂದಿದ್ದು, ಅಲ್ಲಿ 2 ನೇ ಆರೋಪಿ ಪ್ರೇಮಕುಮಾರನಿಗೆ ಆತನ ಸ್ಕೂಟರನ್ನು ಸಿವಿಲ್ ಆಸ್ಪತ್ರೆಯ ಬಳಿಯೇ ನಿಲ್ಲಿಸುವಂತೆ ಹೇಳಿ, ಪ್ರೇಮಕುಮಾರನನ್ನು 2 ನೇ ಆರೋಪಿ ತನ್ನ ಜೆನ್ ಕಾರಿನಲ್ಲಿ ಆಕಳಗವಿ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಚೆಕ್ ಪೊಸ್ಟ ಬಳಿ ಈ ಮೊದಲೇ 3 ನೇ ಆರೋಪಿ ಅವರಿಗಾಗಿ ತನ್ನ ಬೈಕ್ ನಲ್ಲಿ ಕಾಯುತ್ತಿದ್ದು, 2 ನೇ ಆರೋಪಿ ಆಕಳಗವಿ ಅರಣ್ಣ ಪ್ರದೇಶದ ಚೆಕ್ ಪೋಸ್ಟ್ ಬಳಿ ತನ್ನ ಕಾರ್ ನ್ನು ನಿಲ್ಲಿಸಿ, ಆ ನಂತರ 3 ಜನ

ಸೇರಿ, 3 ನೇ ಆರೋಪಿ ತಂದಿದ್ದ, ಬೈಕ್ ಮೇಲೆ ಅರಣ್ಯ ಪ್ರದೇಶದ ಒಳಗೆ ಇಳಿಜಾರಿನ ಪ್ರದೇಶದ ಕಡೆಗೆ ಸ್ವಲ್ಪ ದೂರ ಹೋಗಿ, ಅಲ್ಲಿ ಬೈಕ್ ನ್ನು ನಿಲ್ಲಿಸಿ, ಆ ನಂತರ ಮೂರೂ ಜನ ಸ್ವಲ್ಪ ದೂರ ನಡೆದುಕೊಂಡು ಹೋಗಿ, ಆ ನಂತರ ಕಟ್ಟಿಗೆ ವ್ಯವಹಾರ ಮಾಡುವವರನ್ನು ನೀವು ನೋಡಬಾರದು ಎಂದು ಹೇಳಿ, 3 ನೇ ಆರೋಪಿ ಪ್ರೇಮಕುಮಾರ ಹಾಗೂ 2 ನೇ ಆರೋಪಿಯ ಕಣ್ಣಿಗೆ ಬಟ್ಟೆಯನ್ನು ಕಟ್ಟಿ, ಸ್ವಲ್ಪ ದೂರ ನಡೆದು ಹೋದ ನಂತರ 2 ಮತ್ತು 3 ನೇ ಆರೋಪಿಗಳು ತಾವು ತಂದಿದ್ದ ಕತ್ತಿಗಳಿಂದ ಪ್ರೇಮಕುಮಾರನ ಮೇಲೆ ಹಲ್ಲೆ ಮಾಡಿ, ಕೊಲೆ ಮಾಡಿ, ಬಿಸಾಡಿರುತ್ತೇವೆ, ಆ ನಂತರ 2 ನೇ ಆರೋಪಿ ತಾನು ಧರಿಸಿದ್ದ ಬಟ್ಟೆಗಳನ್ನು, ಕೃತ್ಯಕ್ಕೆ ಬಳಸಿದ ಕತ್ತಿಗಳನ್ನು ತಾವು ತಂದಿದ್ದ ಬ್ಯಾಗ್ ನಲ್ಲಿ ಹಾಕಿಕೊಂಡು ಹಾಗೂ ಮೃತನ ಪರ್ಸ್, ಮೊಬೈಲ್, ಶೂ, ಚೈನ್ ಮತ್ತು ಮೃತನ ಮೈ ಮೇಲೆ ಇದ್ದ ಬಟ್ಟೆಗಳನ್ನು ಸಹ ಬ್ಯಾಗ್ ನಲ್ಲಿ ಹಾಕಿಕೊಂಡು, ಚೆಕ್ ಪೋಸ್ಟ್ ಬಳಿ ಬಂದು, ಅಲ್ಲಿ ಪ್ರೇಮಕುಮಾರನ ಚೈನ್ ನ್ನು 3 ನೇ ಆರೋಪಿ ತೆಗೆದುಕೊಂಡು ಹೋಗಿದ್ದು, ಮೊಬೈಲ್ ನ್ನು ಬಿಟ್ಟು, ಉಳಿದ ಎಲ್ಲಾ ವಸ್ತುಗಳನ್ನು 2 ನೇ ಆರೋಪಿ ನದಿಯಲ್ಲಿ ಹಾಕಿರುವುದಾಗಿ " ಹೇಳಿರುತ್ತಾರೆ.

14. ಆ ಸಮಯದಲ್ಲಿ ಪೊಲೀಸರು ಪಂಚನಾಮೆ ಮಾಡಿ, ಸ್ಥಳದಲ್ಲಿಯೇ ಶವದ ಪಕ್ಕದಲ್ಲಿ ಬಿದ್ದಿದ್ದ ಹಸಿರು ಬಣ್ಣದ ಬಟ್ಟೆ, ಬಿಳಿ ಬಣ್ಣದ ಬನಿಯನ್ ಬಟ್ಟೆಯನ್ನು ಜಪ್ತುಪಡಿಸಿಕೊಂಡರು. ಆ ನಂತರ ಪೊಲೀಸರು ಶವವನ್ನು ಪರಿಶೀಲಿಸಿ, ಶವ ಪಂಚನಾಮೆಯನ್ನು ಮಾಡಿದರು. ಆ ನಂತರ ಆರೋಪಿಗಳು ಪ್ರೇಮಕುಮಾರನ ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳದಲ್ಲಿ, ಕತ್ತಿಯಿಂದ ಹಲ್ಲೆ ಮಾಡಿದ ಸ್ಥಳದಲ್ಲಿ ಪಂಚನಾಮೆ ಮಾಡಿದರು. ಶವ ಬಿದ್ದ ಸ್ಥಳದಿಂದ ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳ 210 ಅಡಿ ದೂರ ಇರುತ್ತದೆ ಹಾಗೂ ಶವ ಬಿದ್ದ ಸ್ಥಳದಿಂದ ಕತ್ತಿಯಿಂದ ಹಲ್ಲೆ ಮಾಡಿದ ಸ್ಥಳ 150 ಅಡಿ ದೂರದಲ್ಲಿರುತ್ತದೆ. ಆ ನಂತರ ಆರೋಪಿಗಳು ಬೈಕ್ ನ್ನು ನಿಲ್ಲಿಸಿಟ್ಟ ಸ್ಥಳದಲ್ಲಿ ಪೊಲೀಸರು ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಸ್ಥಳವು ಶವ ಬಿದ್ದ ಸ್ಥಳದಿಂದ 240 ಅಡಿ ದೂರದಲ್ಲಿರುತ್ತದೆ. ಆ ಸಮಯದಲ್ಲಿ ಮಳೆ ಬಿದ್ದಿದ್ದರಿಂದ ಬೈಕ್ ನಿಲ್ಲಿಸಿಟ್ಟ ಸ್ಥಳದಲ್ಲಿ, ಬೈಕ್ ನ ಚಕ್ರಗಳ ಗುರುತುಗಳು ಕಂಡುಬಂದಿರುತ್ತವೆ. ಆ ನಂತರ ಆರೋಪಿಗಳು ತಮ್ಮ ಕಾರ್ ನ್ನು ನಿಲ್ಲಿಸಿಟ್ಟ ಆಕಳಗವಿ ಅರಣ್ಯ ಪ್ರದೇಶದ ಚೆಕ್ ಪೋಸ್ಟ್ ನಿಂದ 170 ಮೀಟರ್ ದೂರದಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ. ಈ ಎಲ್ಲಾ ಸ್ಥಳಗಳನ್ನು 2 ಮತ್ತು 3 ನೇ ಆರೋಪಿಗಳು ಪೊಲೀಸರಿಗೆ ತೋರಿಸಿರುತ್ತಾರೆ. ಪಂಚನಾಮೆ ಮಾಡುವ ಸಮಯದಲ್ಲಿ ಪೊಲೀಸರು ಪೋಟೋಗಳನ್ನು ತೆಗೆದಿರುತ್ತಾರೆ. ನಿಪಿ-14 ಪೋಟೋದಲ್ಲಿ ಮೃತ ಪ್ರೇಮಕುಮಾರನ

ಶವವನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ ಹಾಗೂ ನಿಪಿ-13 ಮತ್ತು 16 ಪೋಟೋದಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆ.

15. ಪಂಚನಾಮೆಗಳ ನಂತರ ಸ್ಥಳದಲ್ಲಿಯೇ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಿ, ಶವವನ್ನು ನಮಗೆ ಹಸ್ತಾಂತರಿಸಿದರು. ಆ ನಂತರ ಪೊಲೀಸರು 2 ಮತ್ತು 3 ನೇ ಆರೋಪಿಗಳನ್ನು ತಮ್ಮ ವಾಹನದಲ್ಲಿ ಠಾಣೆಗೆ ಕರೆದುಕೊಂಡು ಬಂದರು. ಅದೇ ವಾಹನದಲ್ಲಿ ನಾನು ಹಾಗೂ ನನ್ನ ತಂದೆ ಪೊಲೀಸ್ ಠಾಣೆಗೆ ಬಂದು, ಆ ನಂತರ ಮನೆಗೆ ಬಂದಿರುತ್ತೇವೆ. ಚಾಸಾ-19 ರವರು ಶವವನ್ನು ಅಂಬ್ಯುಲೆನ್ಸ್ ಮೂಲಕ ಮನೆಗೆ ತಂದರು. ಆ ನಂತರ ನಾವು ಶವದ ಮುಖಕ್ಕೆ ಕಟ್ಟಿದ್ದ ಬಟ್ಟೆಯನ್ನು ಬಿಚ್ಚಿ ಮನೆಯವರಿಗೆ ತೋರಿಸಿರುತ್ತೇನೆ ಹಾಗೂ ಅಂತ್ಯ ಸಂಸ್ಕಾರ ಮಾಡಿರುತ್ತೇವೆ. ಈ ವಿಷಯದ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಆ ನಂತರ ಪೊಲೀಸರಿಂದ ಈ ಪ್ರಕರಣದ 4 ಮತ್ತು 5 ನೇ ಆರೋಪಿಗಳು 1 ನೇ ಆರೋಪಿಗೆ ತಪ್ಪಿಸಿಕೊಳ್ಳುವುದಕ್ಕೆ ಸಹಾಯ ಮಾಡಿರುತ್ತಾರೆಂದು ಎಂದು ಹಾಗೂ ಪ್ರೇಮಕುಮಾರನ ಕೊಲೆಯಾದ ವಿಷಯವನ್ನು ತಿಳಿದಿದ್ದರೂ ಸಹ ಪೊಲೀಸರಿಗೆ ವಿಷಯವನ್ನು ತಿಳಿಸದೆ ಮುಚ್ಚಿಟ್ಟಿರುತ್ತಾರೆಂದು ತಿಳಿದು ಬಂದಿರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು-4 ಚೈನ್, ಮುದ್ದೆ ಮಾಲು-8 ಬಿಳಿ ಬನಿಯನ್ ಬಟ್ಟೆ , ಮುದ್ದೆ ಮಾಲು-9 ಟಿ-ಶರ್ಟ್ ನ ತುಂಡು, ಮುದ್ದೆ ಮಾಲು-10 ಶವದ ಮೇಲೆ ಇದ್ದ ನಿಕ್ಕರ್ ನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-3 ಪೋಟೋದಲ್ಲಿರುವ ಪ್ರೇಮಕುಮಾರನ ಸ್ಕೂಟರ್ ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ